**ಕರ್ನಾಟಕ ಸರ್ಕಾರ**
**(ಪಿ.ಆರ್.ಪಿ.67)**

**ಹೇಳಿಕೆ ಹಾಳೆ**
**(ಆರ್.ಪಿ.ಸಂಖ್ಯೆ 57)**
**ನಮೂನೆ ಸಂಖ್ಯೆ 4**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸ್ಪೆಷಲ್ ಕೇಸ್ ನಂಬರ್ : 92/2011**

**ಪ್ರಾಸಾ- 62 ಚಾಸಾ- 88**

ಸಾಕ್ಷಿದಾರರ ಹೆಸರುಃ : ಪಿ ಪಿ ಮುತ್ತಪ್ಪ

ತಂದೆಯ ಹೆಸರುಃ : ಪಿ ಪಿ ಪಳಂಗಪ್ಪ

ವಯಸ್ಸುಃ : 72 ವರ್ಷ

ಉದ್ಯೋಗಃ : ನಿವೃತ್ತ ಶಾಖಾ ವ್ಯವಸ್ಥಾಪಕರು,
ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪೆನಿ.

ವಾಸ : ಮಡಿಕೇರಿ

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 11-07-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು 2002 ರಿಂದ 2012ರವರೆಗೆ ನಾನು ಹಾಸನದಲ್ಲಿ ನ್ಯೂ ಇಂಡಿಯಾ ಅಶ್ಯೂರೆನ್ಸ್ ನಲ್ಲಿ ಶಾಖಾ ವ್ಯವಸ್ಥಾಪಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿಃ11-5-2009 ಹಾಗೂ 24-10-2009ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಚಿಕ್ಕಮಗಳೂರು ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ಪತ್ರಬರೆದು, ವಾಹನ ಸಂಖ್ಯೆ ಕೆಎ-13-ಕ್ಯೂ-8626 ಮತ್ತು ಕೆಎ-13-ಕೆ-1866ರ ವಾಹನಗಳಿಗೆ ಸಂಬಂಧಿಸಿದಂತೆ ನಮ್ಮ ಇನ್ಸುರೆನ್ಸ್ ಕಂಪೆನಿಯಿಂದ ವಿಮಾ ಪಾಲಿಸಿಯನ್ನು ನೀಡಲಾಗಿದೆಯೇ ಎಂದು ಮಾಹಿತಿ ಕೇಳಿದ್ದರು. ಅದರಂತೆ ನಾನು ದಾಖಲೆಯನ್ನು ಪರಿಶೀಲಿಸಿ ಈ ಎರಡೂ ವಾಹನಗಳಿಗೆ ನಮ್ಮ ವಿಮಾ ಕಂಪೆನಿಯಿಂದ ಪಾಲಿಸಿ ನೀಡಲಾಗಿದೆ ಎಂದು ಮಾಹಿತಿಯನ್ನು 14-5-2009 ಮತ್ತು 26-10-2009ರದು ನೀಡಿರುತ್ತೇನೆ. ಅವುಗಳನ್ನು ಈಗ ನೋಡುತ್ತಿದ್ದು ಕ್ರಮವಾಗಿ ನಿಪಿ-107 ಮತ್ತು 108 ಎಂದು ಸಾಕ್ಷಿಯ ರುಜುಗಳನ್ನು

ನಿಪಿ-107(ಎ) ಮತ್ತು 108(ಎ) ಎಂದು ಗುರುತಿಸಲಾಯಿತು.

**<u>ಪಾಟೀಸವಾಲುಃ ಆರೋಪಿ ಪರ ಶ್ರೀ ಬಿ ಜೆ ಪಿ ಎಸ್ ವಕೀಲರಿಂದಃ</u>**

ವಾಹನ ಸಂಖ್ಯೆ ಕೆಎ-13-ಕೆ-1866ನ್ನು ಯಾವಾಗ ಖರೀದಿಸಿದ್ದು ಎಂದು ಮಾಹಿತಿ ನೀಡಿರುತ್ತಾರೆಂದರೆ ನಿಜ. ಆ ವಾಹನವನ್ನು ಫೆಬ್ರವರಿ 2005ರಲ್ಲಿ ಖರೀದಿಸಿದ್ದು ಎಂದರೆ ಸರಿ. ಆ ವಾಹನವನ್ನು 5-3-2007ರಲ್ಲಿ ನಂಜೇಗೌಡ ಎಂಬುವವರಿಗೆ 35ಸಾವಿರ ರೂಪಾಯಿಗ ಮಾರಾಟ ಮಾಡಿದ್ದರು, ಆ ವಿಚಾರವನ್ನು ನಮಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ಆ ದಾಖಲೆಯನ್ನು ಲೋಕಾಯುಕ್ತ ಕಛೇರಿಗೆ ಕೊಟ್ಟಿದ್ದರು, ಆ ವಿಚಾರವನ್ನು ಲೋಕಾಯುಕ್ತ ಕಛೇರಿಯವರು ನಮ್ಮ ಗಮನಕ್ಕೂ ತಂದಿದ್ದರು ಎಂದರೆ ಸರಿಯಲ್ಲ. ಆ ವಾಹನವನ್ನು ಖರೀದಿಸಿದ ನಂಜೇಗೌಡರೇ ಪ್ರೀಮಿಯಂನ್ನು ಚೆಕ್ ಮೂಲಕ ಕಟ್ಟಿದ್ದರು ಎಂದರೆ ನನಗೆ ಈಗ ಹೇಳಲಾಗುವುದಿಲ್ಲ. ವಿಮಾ ಪಾಲಿಸಿ ನೀಡುವುದಕ್ಕಿಂತ ಮೊದಲು ನಾನು ವಾಹನವನ್ನುಖುದ್ದಾಗಿ ಪರಿಶೀಲನೆ ಮಾಡಿಲ್ಲ, ಸಾಕ್ಷಿಯು, ಕಾರಣ ವಿಮಾ ಪಾಲಿಸಿ ಸತತವಾಗಿ ಚಾಲ್ತಿಯಲ್ಲಿತ್ತು ಎನ್ನುತ್ತಾರೆ. ನಿಪಿ-107 ಮತ್ತು 108ರ ಮಾಹಿತಿಯನ್ನು ನನ್ನ ಅಧೀನ ಸಿಬ್ಬಂದಿಗಳು ನೀಡಿದ ವರದಿಯ ಆಧಾರದಲ್ಲಿ ನೀಡಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ಪರಿಶೀಲಿಸಿ ವರದಿ ನೀಡಿರುತ್ತಾರೆ ಎನ್ನುತ್ತಾರೆ.

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**